ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ

ವಿಜಯಪುರ

"ಕನ್ನಡ ಕಾವ್ಯದಲ್ಲಿ ಬಸವಣ್ಣ : ಒಂದು ಅಧ್ಯಯನ"

ಪಿಎಚ್.ಡಿ. ನೋಂದಣಿಗಾಗಿ ಸಲ್ಲಿಸುತ್ತಿರುವ
ಪ್ರಬಂಧದ ಪೂರ್ವಭಾವಿ ಸಾರಲೇಖ

ಮಾರ್ಗದರ್ಶಕರು

ಪ್ರೊ.ವಿಜಯಶ್ರೀ.ಸಬರದ

ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ.

ಸಂಶೋಧನಾ ವಿದ್ಯಾರ್ಥಿನಿ

ಶ್ರೀಮತಿ ಲಕ್ಷ್ಮೀ.ಶೇ.ಅಂಗಡಿ

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ.

೨೦೧೬

ಪರಿವಿಡಿ

ಅಧ್ಯಾಯ-೧ : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ-೨ : ಧರ್ಮ –ಕಾವ್ಯ ಧರ್ಮ

೨.೧) ಕನ್ನಡ ಕಾವ್ಯದ ಮೇಲೆ ಪ್ರಭಾವ ಬೀರಿದ ಧರ್ಮಗಳು

ಅಧ್ಯಾಯ-೩ : ಮಧ್ಯಕಾಲೀನ ಕನ್ನಡ ಕಾವ್ಯಗಳು ಮತ್ತು ಬಸವಣ್ಣ

೩.೧) ಬಸವರಾಜ ದೇವರ ರಗಳೆ, ಬಸವ ಪುರಾಣ (ತೆಲಗು), ಕನ್ನಡ ಬಸವ ಪುರಾಣ, ಬಸವರಾಜ ವಿಜಯಂ ಮತ್ತು ಸಿಂಗಿರಾಜ ಪುರಾಣ.

ಅಧ್ಯಾಯ-೪ : ಆಧುನಿಕ ಕಾವ್ಯ ಪರಂಪರೆ-ಬಸವಣ್ಣನವರ ಪ್ರಭಾವ

೪.೧) ನವೋದಯ ಕಾವ್ಯ

೪.೨) ನವ್ಯ ಕಾವ್ಯ

೪.೩) ದಲಿತ-ಬಂಡಾಯ ಕಾವ್ಯ

ಅಧ್ಯಾಯ-೫ : ಆಧುನಿಕ ಕನ್ನಡ ಕವಿತೆಗಳಲ್ಲಿ ಬಸವಣ್ಣ

೫.೧) ಬಿಡಿಗವಿತೆಗಳು, ಕಥನ ಕವನಗಳು, ಖಂಡಕಾವ್ಯಗಳು

ಅಧ್ಯಾಯ-೬ : ಆಧುನಿಕ ಕನ್ನಡ ಕಾವ್ಯಗಳು ಮತ್ತು ಬಸವಣ್ಣ

೧) ಶ್ರೀ ಬಸವ ದರ್ಶನಂ ೨) ಬಸವ ಬೆಳಗು ೩) ಬಸವಕಾವ್ಯ ದರ್ಶನ ೪) ಬಸವ ಮಹಾಕಾವ್ಯ ೫) ಸಂಗನಬಸವ ವಿಜಯ ೬) ಯುಗಾವತಾರಿ ೭) ಬಸವ ದರ್ಶನ

ಅಧ್ಯಾಯ-೭ : ಸಮಾರೋಪ

ಅಧ್ಯಾಯ-೧
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

"ಕನ್ನಡ ಕಾವ್ಯದಲ್ಲಿ ಬಸವಣ್ಣ: ಒಂದು ಅಧ್ಯಯನ" ಎಂಬ ಸಂಶೋಧನಾ ಪ್ರಬಂಧವು ಬಸವಣ್ಣನವರ ವ್ಯಕ್ತಿತ್ವ ಕುರಿತಾಗಿ ಸಮಗ್ರವಾಗಿ ಅಧ್ಯಯನ ನಡೆಸಲಾಗುವುದು. ಈಗಾಗಲೇ ಬಸವಣ್ಣನವರ ಕುರಿತು ಗದ್ಯ ಸಾಹಿತ್ಯವನ್ನು ಆಧರಿಸಿ ಸಂಶೋಧನೆ ಮಾಡಲಾಗಿದೆ. ಆದರೆ ನಡುಗನ್ನಡ ಮತ್ತು ಆಧುನಿಕ ಕನ್ನಡ ಕಾವ್ಯ ಪ್ರಕಾರದಲ್ಲಿ ಬಸವಣ್ಣನವರ ಕುರಿತಾದ ಸಂಶೋಧನಾ ಕಾರ್ಯ ನಡೆದಿರುವುದಿಲ್ಲ. ಕನ್ನಡ ಕಾವ್ಯ ಪರಂಪರೆಯಲ್ಲಿ ಬಸವಣ್ಣನವರ ವ್ಯಕ್ತಿತ್ವವನ್ನು ಯಾವ ರೀತಿ ಚಿತ್ರಿಸಿದ್ದಾರೆ ಎಂಬುದನ್ನು ಅಧ್ಯಯನ ಮಾಡುವುದು ಈ ಸಂಶೋಧನಾ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಕನ್ನಡ ಕವಿಗಳು ಬಸವಣ್ಣನವರ ವ್ಯಕ್ತಿತ್ವವನ್ನು ತಮ್ಮ ಕಾವ್ಯದ ಮೂಲಕ ಯಾವ ರೀತಿ ವಿಭಿನ್ನ ನೆಲೆಯಲ್ಲಿ ಚಿತ್ರಿಸಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗುವುದು. ೧೨ನೇ ಶತಮಾನದಲ್ಲಿ ಬದುಕಿದ ಬಸವಣ್ಣನವರು ತಮ್ಮ ವಚನಗಳ ಮೂಲಕ ಸಮಾಜಕ್ಕೆ ತಿಳಿಯಪಡಿಸಿದ ಮಾನವೀಯ ಮೌಲ್ಯಗಳು, ಆದರ್ಶ ತತ್ವಗಳು, ಆಧ್ಯಾತ್ಮಿಕ ಚಿಂತನೆಗಳು, ಇನ್ನೂ ಹಲವಾರು ವಿಚಾರಗಳು ಆಧುನಿಕ ಕಾಲದಲ್ಲೂ ಹೇಗೆ ಪ್ರಸ್ತುತವಾಗಿವೆ ಎಂಬುದನ್ನು ಗುರುತಿಸಿ ಬೆಳಕಿಗೆ ತರುವುದು ಈ ಅಧ್ಯಯನದ ಉದ್ದೇಶವಾಗಿದೆ.

ಕನ್ನಡ ಕಾವ್ಯಗಳಲ್ಲಿ ಬಸವಣ್ಣನವರನ್ನು ಸಮಾಜ ಸುಧಾರಕನಾಗಿ, ಆಧ್ಯಾತ್ಮಿಕ ಚಿಂತಕನಾಗಿ, ಕ್ರಾಂತಿಕಾರಿ ಪುರುಷನಾಗಿ, ಭಕ್ತಿ ಭಂಡಾರಿಯಾಗಿ, ಪೌರಾಣಿಕ ವ್ಯಕ್ತಿಯಾಗಿ, ಇತಿಹಾಸದ ಹರಿಕಾರನಾಗಿ, ಗುರುವಾಗಿ, ವೀರಶೈವ ಧರ್ಮ ಸ್ಥಾಪಕನಾಗಿ,

ಶ್ರೇಷ್ಠಶರಣರನ್ನಾಗಿ, ಸಾಂಸಾರಿಕ ಜೀವಿಯಾಗಿ ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗುವುದು.

☆ ಅಧ್ಯಯುನದ ವ್ಯಾಪ್ತಿ :

ಈ ಸಂಶೋಧನಾ ಅಧ್ಯಯನದಲ್ಲಿ ಕನ್ನಡ ಕಾವ್ಯಗಳಲ್ಲಿ ಬಸವಣ್ಣನವರ ವ್ಯಕ್ತಿತ್ವವನ್ನು ಯಾವ ರೀತಿ ಚಿತ್ರಿಸಿದ್ದಾರೆ ಎಂಬುದನ್ನು ಮಾತ್ರ ಅಧ್ಯಯನ ಕೈಗೊಳ್ಳಲಾಗುವುದು. ಅಧ್ಯಯನದ ಅನುಕೂಲತೆಗಾಗಿ ೭ ಅಧ್ಯಯನಗಳನ್ನು ಮಾಡಿಕೊಳ್ಳಲಾಗಿದೆ.

ಮೊದಲನೆ ಅಧ್ಯಾಯ : “ಕನ್ನಡ ಕಾವ್ಯದಲ್ಲಿ ಬಸವಣ್ಣ; ಒಂದು ಅಧ್ಯಯನ” ಎಂಬ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿಯ ಕುರಿತು ತಿಳಿಸಲಾಗುವುದು.

ಎರಡನೆಯ ಅಧ್ಯಾಯ : “ಧರ್ಮ-ಕಾವ್ಯಧರ್ಮ” ಕುರಿತು ಅಧ್ಯಯನ ಮಾಡಲಾಗುವುದು.

ಮೂರನೆಯ ಅಧ್ಯಾಯ : “ಮಧ್ಯಕಾಲೀನ ಕನ್ನಡ ಕಾವ್ಯಗಳು ಮತ್ತು ಬಸವಣ್ಣ” ಎಂಬ ವಿಷಯದಡಿಯಲ್ಲಿ ಬಸವಣ್ಣನವರ ವ್ಯಕ್ತಿತ್ವವನ್ನು ಪರಿಚಯಿಸಲಾಗುವುದು.

ನಾಲ್ಕನೇಯ ಅಧ್ಯಾಯ : “ಆಧುನಿಕ ಕನ್ನಡ ಕಾವ್ಯ ಪರಂಪರೆ-ಬಸವಣ್ಣನವರ ಪ್ರಭಾವ” ಈ ಅಧ್ಯಾಯದಲ್ಲಿ ಬಸವಣ್ಣನವರ ವಚನ ಶೈಲಿ ಹಾಗೂ ಅವರ ವಿಚಾರಧಾರೆ ಆಧುನಿಕ ಕಾವ್ಯದ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ಗುರುತಿಸಲಾಗುವುದು.

ಐದನೆಯ ಅಧ್ಯಾಯ : “ಆಧುನಿಕ ಕನ್ನಡ ಕವಿತೆಗಳಲ್ಲಿ ಬಸವಣ್ಣ” ಈ ಅಧ್ಯಾಯದಲ್ಲಿ ಆಧುನಿಕ ಕಾವ್ಯ ಪ್ರಕಾರಗಳಲ್ಲಿ ಬಸವಣ್ಣನವರನ್ನು ಕುರಿತು ಕವಿಗಳು ಚಿತ್ರಿಸಿರುವ ಬಗೆಯನ್ನು ಗುರುತಿಸಲಾಗುವುದು.

ಆರನೆಯ ಅಧ್ಯಾಯ : “ಆಧುನಿಕ ಕನ್ನಡ ಕಾವ್ಯಗಳು ಮತ್ತು ಬಸವಣ್ಣ” ಆಧುನಿಕ ಕಾವ್ಯ ಪ್ರಕಾರಗಳಲ್ಲೊಂದಾದ ಮಹಾಕಾವ್ಯಗಳಲ್ಲಿ ಬಸವಣ್ಣನವರ ಬಹುಮುಖ ವ್ಯಕ್ತಿತ್ವವನ್ನು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ವಿಮರ್ಶಿಸಲಾಗುವುದು.

ಕೊನೆಯದಾಗಿ ಅಧ್ಯಾಯನದ ಒಟ್ಟು ಫಲಿತಾಂಶವನ್ನು ಅಧ್ಯಾಯ ಏಳು ಸಮಾರೋಪದಲ್ಲಿ ತಿಳಿಸಲಾಗುವುದು.

ಅಧ್ಯಾಯ-೨
ಧರ್ಮ-ಕಾವ್ಯಧರ್ಮ

೨.೧) ಕನ್ನಡ ಕಾವ್ಯದ ಮೇಲೆ ಪ್ರಭಾವ ಬೀರಿದ ಧರ್ಮಗಳು :

ಕನ್ನಡ ನಾಡಿನ ಸಾಹಿತ್ಯ ಚರಿತ್ರೆಯೆಂದರೆ, ಅದು ಧರ್ಮದ ಚರಿತ್ರೆಯಾಗಿದೆ. ಸಾಹಿತ್ಯ ಮತ್ತು ಧರ್ಮದ ಸಂಬಂಧದ ಎಳೆ ಅತ್ಯಂತ ಸೂಕ್ಷ್ಮವಾದದ್ದು, ಕನ್ನಡ ಸಾಹಿತ್ಯ ಮತ್ತು ಧರ್ಮ ಎರಡನ್ನು ಬೇರ್ಪಡಿಸಲಾರದಷ್ಟು ಬೆಸುಗೆಯಾಗಿ ಬೆಳೆದುಕೊಂಡು ಬಂದಿವೆ. ಕಾವ್ಯ ಧರ್ಮ ಎನ್ನುವುದು ಧರ್ಮದ ವಿಚಾರಗಳನ್ನು, ತತ್ವಗಳನ್ನು ಜೊತೆಯಲ್ಲಿ ಅಳವಡಿಸಿಕೊಂಡಿರುತ್ತದೆ. ಧರ್ಮ ಕಾವ್ಯದ ತಿರುಳಾಗಿದೆ. ಪ್ರತಿಯೊಬ್ಬ ವ್ಯಕ್ತಿ ತನ್ನ ಧರ್ಮವನ್ನು ಎತ್ತಿಹಿಡಿಯುವುದು ತಮ್ಮ ಕರ್ತವ್ಯ ಎಂದು ತಿಳಿದಿದ್ದು, ಇದು ಪ್ರಾಚೀನ ಕವಿಗಳಲ್ಲಿ ಸ್ಪಷ್ಟವಾಗಿ ಎದ್ದುಕಾಣುತ್ತದೆ.

☆ ಪ್ರಾಚೀನ ಕಾವ್ಯ :

ಪ್ರಾಚೀನ ಕನ್ನಡ ಕವಿಗಳ ಮೇಲೆ 'ಧರ್ಮ' ಗಾಢವಾದ ಪ್ರಭಾವ ಬೀರಿದೆ. ಪಂಪ, ರನ್ನ, ಪೊನ್ನ, ನಾಗಚಂದ್ರ ಇವರೆಲ್ಲ ಆಗಮಿಕ ಕಾವ್ಯಗಳನ್ನು ರಚಿಸಿದ್ದಕೆ ಪ್ರಬಲ ಕಾರಣ ಧರ್ಮ. ಜೈನ ಧರ್ಮವನ್ನು ಎತ್ತಿ ಹಿಡಿಯುವ ಕಾಳಜಿ ಪ್ರಧಾನವಾಗಿತ್ತು. ಧರ್ಮಗುರುವಿನ ಗುಣಸ್ತುತಿಯನ್ನು ಹೇಳುವುದರ ಮೂಲಕ ಕಾವ್ಯವನ್ನು ಪ್ರಾರಂಭಿಸಿರುವುದನ್ನು ಕಾಣುತ್ತೇವೆ. "ಬದುಕಿ ಉಳಿದರೆ ಇಹಲೋಕದ ಭೋಗ, ಹೋರಾಡಿ ಸತ್ತರೆ ಸ್ವರ್ಗಭೋಗ" ಎಂಬ ಲೌಕಿಕ ಭಾವನೆಯೂ ಈ ಬದುಕು ನಶ್ವರ; ಭೋಗಗಳೆಲ್ಲಾ ವಿಷಸಮಾನ, ಜಿನೇಂದ್ರ ಚರಣವೇ ಶರಣ ಎಂಬ ಆಗಮಿಕ ಭಾವನೆಯೂ ಕಾವ್ಯದ ಮೇಲೆ ಪ್ರಭಾವ ಬೀರಿದ್ದು ಕಂಡುಬರುತ್ತದೆ.

ಪಂಪಪೂರ್ವ ಕವಿಗಳು 'ಜೈನಧರ್ಮ'ದ ಪ್ರತಿಪಾದನೆಯೇ ಕಾವ್ಯದ ಅಂತಿಮ ಮೌಲ್ಯವೆಂದು ತಿಳಿದಿದ್ದರು. ಕಾವ್ಯ ಧರ್ಮ ಎನ್ನುವುದು ಕವಿತ್ವದ ಪರಿಪಕ್ವ ಸ್ಥಿತಿ ಎಂಬುದನ್ನು ಪಂಪನಲ್ಲಿ ಪರಮಾವಧಿ ಮಟ್ಟದಲ್ಲಿತ್ತು. ಹೀಗೆ ಪ್ರಾಚೀನ ಕಾವ್ಯಗಳನ್ನು ಮತಧರ್ಮದ ಆಧಾರದ ಮೇಲೆ ವಿಭಾಗಿಸುವಷ್ಟು 'ಧರ್ಮ' ಕಾವ್ಯದ ಮೇಲೆ ಹೇಗೆ ಪ್ರಭಾವ ಬೀರಿತು ಮತ್ತು ಕಾವ್ಯದೊಳಗೆ ಧರ್ಮವನ್ನು ಹೇಗೆ ಸಮನ್ವಯಗೊಳಿಸಿದರು ಎಂಬುದನ್ನು ತಿಳಿಸಲಾಗುವುದು.

☆ ಮಧ್ಯಕಾಲೀನ ಕಾವ್ಯ :

ಜೈನಯುಗ ಮೆಲ್ಲಗೆ ಕಣ್ಮರೆಯಾಗಿ ೧೨ನೇ ಶತಮಾನದಲ್ಲಿ ವಚನಕಾರಯುಗ ಪ್ರಾರಂಭವಾಯಿತು. ಧರ್ಮದ ಯುಗವೇ ಬದಲಾಯಿತು. ವೀರಶೈವ ಧರ್ಮದ ಸ್ಥಾಪನೆಯ ಮೂಲಕ ಸಾಮಾಜಿಕವಾಗಿ, ಧಾರ್ಮಿಕವಾಗಿ, ಜೀವನಕ್ರಮ ಬದಲಾವಣೆ ಕಂಡಿತು. ಭಕ್ತಿಭಂಡಾರಿ ಎಂದು ಪ್ರಶಂಸೆಗೊಳಗಾದ ಬಸವಣ್ಣನವರನ್ನು ಆದರ್ಶವಾಗಿಟ್ಟುಕೊಂಡು ಸುಮಾರು ೧೫ನೇ ಶತಮಾನದವರೆಗೆ ಅನೇಕ ವೀರಶೈವ ಕವಿಗಳು ಕಾವ್ಯರಚನೆ ಮಾಡಿದರು ಮತ್ತು ಶರಣರ ಕುರಿತು ಕಾವ್ಯಗಳನ್ನು ಬರೆದರು.

ವಚನಕಾರರು ಅರಸೊತ್ತಿಗೆಯನ್ನು ಪ್ರತಿಭಟಿಸಿ ಸ್ವತಂತ್ರವಾಗಿ ಬದುಕಿದವರು. ವೀರಶೈವ ಧರ್ಮದ ಆದರ್ಶಗಳಿಂದ ಪ್ರೇರೇಪಿತರಾದ ಶರಣರು ಸಾಮಾನ್ಯ ಜನರ ಸಾಮಾಜಿಕ, ಧಾರ್ಮಿಕ, ಅಸಮಾನತೆಗೆ ಅನುಗುಣವಾಗಿ ವಚನಗಳನ್ನು ರಚಿಸಿದರು. ಕೀರ್ತನಕಾರರಂತೂ ಸಂಪೂರ್ಣವಾಗಿ ಅನುಭಾವಿಕ ನೆಲೆಯಲ್ಲಿ ಲೌಕಿಕದ ಅಸತ್ಯತೆಯನ್ನು ಒತ್ತಿ ಹೇಳುತ್ತಲೇ ಪರಮಾತ್ಮನ ಸಾನಿಧ್ಯದ ಸ್ಥಿತಿಗೆರುವುದೇ ಮಾನವ ಜನ್ಮದ ಬಹುದೊಡ್ಡ ಸಾಧನೆ ಎಂಬುದನ್ನು ಕೀರ್ತನೆಗಳ ಮೂಲಕ ಹಾಡಿ ಹೊಗಳಿದರು.

ಹೀಗೆ ರಾಜ್ಯಪರ ಮೌಲ್ಯಗಳನ್ನು ದಿಕ್ಕರಿಸಿ ಧರ್ಮಪರ ಮೌಲ್ಯಗಳನ್ನು ಯಾವ ರೀತಿ ಕಾವ್ಯ ಧರ್ಮದ ಮೂಲಕ ಸಮಾಜಕ್ಕೆ ತಿಳಿಸಿದರು ಎಂಬುದನ್ನು ವಿವರಿಸಲಾಗುವುದು.

☆ **ಆಧುನಿಕ ಕಾವ್ಯ :**

'ಉದಾರ ಮಾನವತಾವಾದ' ಆಧುನಿಕ ಕಾವ್ಯಧರ್ಮವಾಯಿತು. 'ಏಕತೆಯ ದರ್ಶನವೇ' ಆಧ್ಯಾತ್ಮವಾಯಿತು. ಜೀವನದ ಪ್ರತಿಬಿಂಬ ಧರ್ಮವೆಂಬ ಆಲೋಚನಾ ಕ್ರಮ ಪ್ರಾರಂಭವಾಯಿತು. ಜೀವನ ಶ್ರದ್ಧೆ, ವೈಚಾರಿಕ ಮನೋಧರ್ಮ, ಜಾತ್ಯಾತೀತತೆ, ಮಾನವೀಯ ಮೌಲ್ಯಗಳು, ಈ ಎಲ್ಲಾ ಚಿಂತನೆಗಳು ಆಧುನಿಕ ಕಾವ್ಯದಲ್ಲಿ ಹೇಗೆ ಚಿತ್ರಿತಗೊಂಡಿವೆ ಎಂಬುದನ್ನು ವಿವೇಚಿಸಲಾಗುವುದು.

☆ **ಪ್ರಗತಿಶೀಲ ಮತ್ತು ನವ್ಯ ಕಾವ್ಯ :**

ಈ ಕಾಲಘಟ್ಟದಲ್ಲಿ ಪ್ರಗತಿಪರ ಆಲೋಚನೆಗಳು, ಸಾಮಾಜಿಕ ಸುಧಾರಣೆ, ಮನುಷ್ಯನ ಅಸ್ತಿತ್ವದ ಹುಡುಕಾಟ, ಕಾವ್ಯದ ಆಶಯವಾಗಿ ಮೂಡಿಬಂದಿದ್ದು, ಹೊಸದೊಂದು ಸಮಾಜ ನಿರ್ಮಾಣ ಮಾಡುವುದು ಕಾವ್ಯಧರ್ಮವಾಗಿ ಯಾವ ರೀತಿ ಬೆಳೆದುಬಂದಿತು ಎಂಬುದನ್ನು ಗಮನಿಸಲಾಗುವುದು.

☆ **ದಲಿತ ಬಂಡಾಯ ಕಾವ್ಯ :**

ವಚನ ಚಳುವಳಿ ಪರಂಪರೆಯ ಮುಂದುವರಿಕೆಯಾಗಿ ಹುಟ್ಟಿಕೊಂಡಿತು. ದಲಿತ ಬಂಡಾಯ ಕಾವ್ಯದಲ್ಲಿ ಬಸವಣ್ಣನವರ ವ್ಯಕ್ತಿತ್ವದ ಪ್ರಭಾವ ಅಧಿಕವಾಗಿ ಕಂಡುಬರುತ್ತದೆ. ಬಸವಣ್ಣನವರ ಹೋರಾಟದ ಬದುಕು, ಆದರ್ಶ ವಿಚಾರಗಳು, ಮಾನವೀಯ ಮೌಲ್ಯಗಳು ದಲಿತ ಬಂಡಾಯ ಕಾವ್ಯದಲ್ಲಿ ವ್ಯಕ್ತವಾದ ಬಗೆಯನ್ನು ಗುರುತಿಸಲಾಗುವುದು.

ಅಧ್ಯಾಯ–೩
ಮಧ್ಯಕಾಲೀನ ಕನ್ನಡ ಕಾವ್ಯಗಳು ಮತ್ತು ಬಸವಣ್ಣ

ಮಧ್ಯಕಾಲೀನ ಕನ್ನಡ ಕಾವ್ಯಸಂದರ್ಭದಲ್ಲಿ ಬಸವಣ್ಣನವರ ಕುರಿತು ಹಲವಾರು ಕಾವ್ಯಗಳು ರಚನೆಗೊಂಡವು. ಮುಖ್ಯವಾಗಿ ಹರಿಹರನ 'ಬಸವರಾಜ ದೇವರ ರಗಳೆ', ಪಾಲ್ಕುರಿಕೆ ಸೋಮನಾಥನ 'ಬಸವ ಪುರಾಣಮು' (v®UÄ) P£Ìq ಭೀಮಕವಿಯ 'ಬಸವ

ಪುರಾಣ', ಷಡಕ್ಷರದೇವನ 'ಬಸವರಾಜ ವಿಜಯಂ', ಮತ್ತು ಸಿಂಗಿರಾಜನ 'ಸಿಂಗಿರಾಜಪುರಾಣ' ಕಾವ್ಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇನ್ನುಳಿದ ಕಾವ್ಯಗಳ ಬಗ್ಗೆಯೂ ಗಮನಿಸಲಾಗುವುದು.

ಈಗಾಗಲೇ ಈ ವಿಷಯಕ್ಕೆ ಸಂಬಂಧಿಸಿದಂತೆ ಆಕರಗಳ ಸಂಗ್ರಹ ಮಾಡಲಾಗಿದ್ದು, ಪ್ರತಿಯೊಂದು ಕಾವ್ಯದಲ್ಲಿ ಬಸವಣ್ಣನವರ ವ್ಯಕ್ತಿತ್ವವನ್ನು ಯಾವ ರೀತಿ ಚಿತ್ರಿಸಿದ್ದಾರೆ ಎಂಬುದನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಕೈಗೊಳ್ಳಲಾಗುವುದು.

ಅಧ್ಯಾಯ-೪
ಆಧುನಿಕ ಕನ್ನಡ ಕಾವ್ಯ ಪರಂಪರೆ; ಬಸವಣ್ಣನವರ ಪ್ರಭಾವ

ಕನ್ನಡ ಸಾಹಿತ್ಯ ಹಾಗೂ ಜನಜೀವನದ ಮೇಲೆ ಬಸವಣ್ಣನವರ ವಿಚಾರಗಳು ಬಹಳಷ್ಟು ಪ್ರಭಾವ ಬೀರಿವೆ. ಕನ್ನಡ ಸಾಹಿತ್ಯದಲ್ಲಿ ಬಸವಣ್ಣನವರ ಕುರಿತು ಒಂದು ಕಾವ್ಯ ಪರಂಪರೆಯೇ ಕಂಡುಬರುತ್ತದೆ.

೪.೧) ನವೋದಯ ಕಾವ್ಯ :

ನವೋದಯ ಕಾಲಸಂದರ್ಭದಲ್ಲಿ 'ಕಾವ್ಯ' ಸಮೃದ್ಧವಾಗಿ ಬೆಳೆದುಬಂದಿತು. ವಿಶಾಲವಾದ ವಿಭಿನ್ನವಾದ ಸ್ವರೂಪವನ್ನು ಪಡೆದುಕೊಂಡಿತು. ನವೋದಯ ಕಾಲದಲ್ಲಿ ಬಸವಣ್ಣನವರ ಪ್ರಭಾವ ಆಗಿರುವುದು, ಕಾವ್ಯ ರಚನೆಗಳ ಮೂಲಕ ಕಂಡುಬರುತ್ತವೆ. ಮಾನವೀಯ ಮೌಲ್ಯಗಳು, ಆದರ್ಶ ತತ್ವಗಳು, ಆಧ್ಯಾತ್ಮಿಕ ಚಿಂತನೆಗಳಲ್ಲಿ ಬಸವಣ್ಣನವರ ವ್ಯಕ್ತಿತ್ವ ಕಾವ್ಯಗಳಲ್ಲಿ ಯಾವ ರೀತಿ ಪ್ರಭಾವ ಬೀರಿದೆ ಎಂಬುದನ್ನು ಗುರುತಿಸಲಾಗುವುದು.

೪.೨) ನವ್ಯಕಾವ್ಯ :

ಮನುಷ್ಯನ 'ಅಸ್ತಿತ್ವದ' ಹುಡುಕಾಟ ನವ್ಯ-ಕಾವ್ಯದ ಪ್ರಮುಖ ಆಶಯವಾಗಿದೆ. ಇದರ ಜೊತೆಯಲ್ಲಿಯೇ ಹೊಸ ಸಮಾಜದ ನಿರ್ಮಾಣ, ಸಮಾಜದಲ್ಲಿಯ ಅಸಮಾನತೆ

ಜಾತಿವ್ಯವಸ್ಥೆ, ವರ್ಗ, ವರ್ಣ, ಕಲಹ ಈ ಎಲ್ಲಾ ಚಿಂತನೆಗಳ ಹಿಂದೆ ಬಸವಣ್ಣನವರ ವ್ಯಕ್ತಿತ್ವ ಕಾವ್ಯದಲ್ಲಿ ಯಾವ ರೀತಿ ಪ್ರಭಾವ ಬೀರಿದೆ ಎಂಬುದನ್ನು ವಿವರಿಸಲಾಗುವುದು.

೪.೩) ದಲಿತ ಬಂಡಾಯ ಕಾವ್ಯ :

ಬಸವಣ್ಣನವರ ವ್ಯಕ್ತಿತ್ವ, ಶರಣರ ಹೋರಾಟದ ಬದುಕು ಅತೀ ಹೆಚ್ಚು ಪ್ರಭಾವ ಬೀರಿದ್ದು, ದಲಿತ ಬಂಡಾಯ ಕಾವ್ಯಗಳಲ್ಲಿ ಹಲವಾರು ಕವಿಗಳು ತಮ್ಮ ಕಾವ್ಯದ ಮೂಲಕ ಬಸವಣ್ಣನವರ ವಿಚಾರಗಳನ್ನು ಪ್ರಸ್ತುತಪಡಿಸಿದ್ದಾರೆ. ದಲಿತ ಬಂಡಾಯ ಕಾವ್ಯಗಳಲ್ಲಿ ಬಸವಣ್ಣನವರ ವ್ಯಕ್ತಿತ್ವ ಯಾವ ರೀತಿ ಚಿತ್ರಿತಗೊಂಡಿದೆ ಎಂಬುದರ ಕುರಿತು ಅಧ್ಯಯನ ಮಾಡಲಾಗುವುದು.

ಅಧ್ಯಾಯ-೫
ಆಧುನಿಕ ಕನ್ನಡ ಕವಿತೆಗಳಲ್ಲಿ ಬಸವಣ್ಣ

ಆಧುನಿಕ ಕನ್ನಡ ಕಾವ್ಯ ಪ್ರಕಾರಗಳಾದ ಕವಿತೆ, ಕಥನ ಕವನಗಳು, ಖಂಡ ಕಾವ್ಯಗಳೆಂದು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಆಕರ ಸಂಗ್ರಹ ಮಾಡಲಾಗಿದ್ದು, ಆಧುನಿಕ ಕವಿತೆಗಳಲ್ಲಿ ಬಸವಣ್ಣನವರ ವ್ಯಕ್ತಿತ್ವವನ್ನು ಯಾವ ರೀತಿ ವಿಭಿನ್ನ ನೆಲೆಯಲ್ಲಿ ಸೆರೆಹಿಡಿದಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗುವುದು.

ಅಧ್ಯಾಯ-೬
ಆಧುನಿಕ ಕನ್ನಡ ಕಾವ್ಯಗಳು ಮತ್ತು ಬಸವಣ್ಣ

ಆಧುನಿಕ ಕನ್ನಡ ಕಾವ್ಯಕೃತಿಗಳಲ್ಲಿ ಬಸವಣ್ಣನವರ ವ್ಯಕ್ತಿತ್ವ ಕುರಿತಾಗಿ ಒಟ್ಟು ೭ ಮಹಾಕಾವ್ಯಗಳು ರಚನೆಗೊಂಡಿವೆ. ಬಸವರಾಜ ತುಪ್ಪದವರ 'ಶ್ರೀ ಬಸವ ದರ್ಶನಂ', ಪ್ರದೀಪಕುಮಾರ ಹೆಬ್ರಿಯವರ 'ಯುಗಾವತಾರಿ', (ಆರು ಸಂಪುಟಗಳು) ಡಾ.ಆರ್. ಸಿ.ಮುದ್ದೇಬಿಹಾಳರವರ 'ಬಸವ ಬೆಳಗು', ಲತಾ ರಾಜಶೇಖರವರ 'ಬಸವ ಮಹಾಕಾವ್ಯ', ಜಿ.ಎಚ್. ಹನ್ನೆರಡಮಠರವರ 'ಶ್ರೀ ಬಸವಕಾವ್ಯದರ್ಶನ' ನಿರುಪಾಧೀಶ ಸ್ವಾಮಿಗಳು ಮರೆಗುದ್ದಿ, '²Ã ಸಂಗನಬಸವ ವಿಜಯ', ಬಿ.ಸಿದ್ದಗಂಗಯ್ಯ ಕಂಬಾಳರ 'ಬಸವ ದರ್ಶನ', ಈ ಎಲ್ಲಾ ಮಹಾಕಾವ್ಯಗಳನ್ನು ಈಗಾಗಲೇ ಸಂಗ್ರಹ ಮಾಡಲಾಗಿದೆ. ಪ್ರತಿಯೊಂದು

ಮಹಾಕಾವ್ಯಗಳಲ್ಲಿ ಬಸವಣ್ಣನವರ ಬಹುಮುಖ ವ್ಯಕ್ತಿತ್ವವನ್ನು ವಿಭಿನ್ನ ನೆಲೆಯಲ್ಲಿ ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ವಿಮರ್ಶಾತ್ಮಕವಾಗಿ ತೌಲನಿಕವಾಗಿ ಆಳವಾದ ಅಧ್ಯಯನ ಕೈಗೊಳ್ಳಲಾಗುವುದು.

ಅಧ್ಯಾಯ–೭

ಸಮಾರೋಪ

"ಕನ್ನಡ ಕಾವ್ಯದಲ್ಲಿ ಬಸವಣ್ಣ: ಒಂದು ಅಧ್ಯಯನ". ಇದು ಬಸವಣ್ಣನವರ ವ್ಯಕ್ತಿತ್ವ ಕುರಿತಾದ ಸಮಗ್ರ ಅಧ್ಯಯನವಾಗಿದೆ. ನಡುಗನ್ನಡ ಮತ್ತು ಆಧುನಿಕ ಕಾವ್ಯ ಪರಂಪರೆಯಲ್ಲಿ ಬಸವಣ್ಣನವರ ವ್ಯಕ್ತಿತ್ವ ಯಾವ ರೀತಿ ಕವಿಗಳ ಮೇಲೆ ಪ್ರಭಾವ ಬೀರಿದೆ ಮತ್ತು ಕಾವ್ಯಗಳಲ್ಲಿ ಹೇಗೆ ಚಿತ್ರಿತಗೊಂಡಿದೆ ಎಂಬುದನ್ನು ವಿಮರ್ಶಾತ್ಮಕವಾಗಿ ತೌಲನಿಕವಾಗಿ ಸಂಶೋಧನ ಅಧ್ಯಯನ ಕೈಗೊಳ್ಳಲಾಗುವುದು ಮತ್ತು ಆಧುನಿಕ ಕಾಲದಲ್ಲಿ ಬಸವಣ್ಣನವರ ವಿಚಾರಗಳ ಪ್ರಸ್ತುತತೆ ಬಗ್ಗೆಯೂ ಅಧ್ಯಯನ ಮಾಡಲಾಗುವುದು.